


ಕವನಗಳಲ್ಲಿ ಮೈಮರೆಯೋಣವೆಂದು ಅವತ್ತಿನ ಪುರವಣಿಯನ್ನು ತೆರೆದಿದ್ದೆ.

‘ವಿ(ಚಾರ) ವಾದಿಗಳ ಮಂತ್ಲಿ ಮೀಟಿಂಗ್’ ಎನ್ನುವ ಶೀರ್ಷಿಕೆಯ ಕವನ ಪ್ರಕಟವಾಗಿತ್ತು.

‘ಎಡದವನು, ಬಲದವನು, ಮಧ್ಯದವನು
ದಪ್ಪ ತಲೆಯವನು, ಸತ್ತ ಕಣ್ಣವನು...
ಜೊತೆಗೆ ಡೊಳ್ಳು ಹೊಟ್ಟೆಯ ನಾನು...’

ಅಂತ ಶುರುವಾಗಿದ್ದ ಕವನ ಓದುತ್ತಲೇ ಮೈಯೆಲ್ಲ ಬೆವರಿಟ್ಟಿತು.

‘ಅಯ್ಯೋ ಶಿವನೆ ಈ ವಯಸ್ಸಿಗೇ ಎಡ ಮತ್ತು ಬಲ ಎಂದರೆ ಏನೆಂದು ತಿಳಿಯದ ಹಾಗಾಯ್ತಲ್ಲ’ ಅಂತ ದಿಗಿಲಾಗತೊಡಗಿತ್ತು. ತಿಳಿವಳಿಕೆಯ ಬಾನನ್ನು ಸಂಶಯದ ಕಪ್ಪುಛಾಯೆ ಆವರಿಸಿದ ದಿನಗಳವು. ಓಬೀರಾಯನ ಕಾಲದ ‘ಎಡ’ ಮತ್ತು ‘ಬಲ’ದ ಅರ್ಥದ ಬಗ್ಗೆ ನನ್ನಲ್ಲಿ ಗೊಂದಲವಿರಲಿಲ್ಲ. ಹಾಗಾಗಿ ಗೂಗಲ್ ಎನ್ನುವ ಆಧುನಿಕ ಗುರುವನ್ನೇ ಕೇಳುವುದೆಂದು ನಿರ್ಧರಿಸಿದೆ. ಆದರೆ ಯಾವ ‘ಎಡ’ ಮತ್ತು ‘ಬಲ’ಗಳನ್ನು ಗೂಗಲ್ ಮಾಡುವುದು ಅನ್ನುವ ಸಮಸ್ಯೆ ಹುಟ್ಟಿಕೊಂಡಿತು.

ಗೊತ್ತಾಗಲಿಲ್ಲವೇ?

ಮನೆಯಲ್ಲಿ ಹೇಳಿಕೊಟ್ಟ ‘ಕೇಡಿಗ’ ಎನ್ನುವ ಎಡವನ್ನೋ ಅಥವಾ ‘ಸಂಭಾವಿತ’ ಅಂತ ತೀರ್ಥ ತೆಗೆದುಕೊಳ್ಳುವಾಗ ಎಡದ ಮೇಲೆ ಕೂರುತ್ತಿದ್ದ ಬಲವನ್ನೋ ಅಂತ ಸ್ವಲ್ಪ ಹೊತ್ತು ಯೋಚಿಸಿದೆ. ಭುಜದ ಮೇಲೆ ಸಮವಾಗಿ ಕೂರುವ ಎಡ ಮತ್ತು ಬಲಗಳನ್ನು ಸಮಾನವಾಗಿ ಗೌರವಿಸಿ ಬಳಸಿಕೊಂಡ ಶಾಲೆಯಲ್ಲಿ ಹೇಳಿಕೊಟ್ಟ ‘ದಾಯೇ’ (ಬಲ) ಮತ್ತು ‘ಬಾಯೇ’ (ಎಡ) ಗಳ ಬಗ್ಗೆಯೇ ಕೇಳಿದರಾಯ್ತು ಅಂತ ನಿರ್ಧರಿಸಿದೆ. ಎಡ ಮತ್ತು ಬಲಗಳಲ್ಲಿ ಯಾವುದನ್ನು ಮೊದಲು ಗೂಗಲಿಸುವುದು? ಅನ್ನೋ ಸಂದಿಗ್ಧ ಶುರುವಾಯ್ತು. ಹುಟ್ಟಿದಾಗಿಂದ ಬಲಕ್ಕೆ ಆದ್ಯತೆ ನೀಡಿ ಬೆಳೆಸಿದ ಪೂರ್ವಗ್ರಹಗಳ ಕಾರಣದಿಂದಾಗಿ ‘ಬಲ’ವನ್ನೇ ಮೊದಲು ಗೂಗಲಿಸುವುದು ಅಂತ ನಿರ್ಧರಿಸಿದೆ. ಇಂಗ್ಲಿಷ್–ಹಿಂದಿ ಡಿಕ್ಷನರಿಯನ್ನು ತೆರೆದು ‘ರೈಟ್’ ಅಂತ ಎಂಟರಿಸಿದೆ.

ಯುರೇಕಾ...

‘ಸಹೀ’ (ಸರಿ) ಎನ್ನುವ ಉತ್ತರ ಬಂತು! ಹಾಗಾದರೆ ‘ಎಡ’ ಅಂದರೆ ‘ಬುರಾ’ (ಕೆಟ್ಟದ್ದು) ಅಂತಿರಲೇಬೇಕು ಅಂತ ನಿರ್ಧರಿಸಿದೆ. ಅಷ್ಟಕ್ಕೂ ಕನ್ನಡ ತರಗತಿಗಳಲ್ಲಿ ‘ಸರಿ’ ಎನ್ನುವುದಕ್ಕೆ ವಿರುದ್ಧ ಪದ ‘ತಪ್ಪು’ ಅಂತ ಹೇಳಿಕೊಟ್ಟಿರಲಿಲ್ಲವೇ? ಹಾಗಾಗಿ ಕಂಪ್ಯೂಟರ್ ಮುಚ್ಚಿದೆ. ಬಲ ಎನ್ನುವುದೇ ‘ಸರಿ’ ಅಂತ ಗೂಗಲ್ ತೀರ್ಪು ಕೊಟ್ಟಾಗಿತ್ತು!

ಮರುದಿನ ಕೆಲಸದ ಸ್ಥಳದಲ್ಲಿ ಮತ್ತೆ ‘ಬಲ’ ಮತ್ತು ‘ಎಡ’ದವರ ನಡುವೆ ಭಯಾನಕ ಗಲಾಟೆ ನಡೆಯುತ್ತಿತ್ತು. ಪ್ರತಿಬಾರಿ ಈ ರೀತಿಯ ಗಲಾಟೆಯ ನಡುವೆ ಸಿಲುಕಿಕೊಂಡಾಗಲೆಲ್ಲ ‘ದರಿದ್ರದವರು, ಎಡ–ಬಲಗಳು ಅಂತ ದಾರಿತಪ್ಪಿದವರು ಕಚ್ಚಾಡಿದಂತೆ ಕಚ್ಚಾಡುತ್ತಾರಲ್ಲ’ ಅಂತ ಮನಸ್ಸಿನಲ್ಲೇ ಬಯ್ದುಕೊಂಡು ಕೂತಿರುತ್ತಿದ್ದೆ. ಆದರೆ ಅವತ್ತು ಇಬ್ಬರ ಬಣಗಳಲ್ಲಿ ಯಾರದ್ದನ್ನು ಆರಿಸಿಕೊಳ್ಳಬೇಕು ಅಂತ ನಿರ್ಧರಿಸಿಯಾಗಿತ್ತು. ಸರಿಯಾದ ಮಾರ್ಗವನ್ನೇ ಆರಿಸಿಕೊಳ್ಳುವುದು ಯಾವತ್ತೂ ಸರಿಯಲ್ಲವೇ? ಜೊತೆಗೆ ಯಾವ ಕಡೆಯೂ ಸೇರಲಾಗದೆ ಇಷ್ಟೂ ದಿನ ನಾನು ಒಬ್ಬಂಟಿಯಾದಂತೆ ಅನ್ನಿಸಿತ್ತು. ಅವತ್ತು ನಾನು ಸೇರ್ಪಡೆಯಾಗಲಿದ್ದೆ.

ಹಾಗಾಗಿ ಮುಖದ ಮೇಲೆ ವಿಜಯದ ಮುಗುಳ್ನಗೆ ಬೀರುತ್ತ ಅವರನ್ನೇ ನೇರದೃಷ್ಟಿಯಿಂದ ನೋಡುತ್ತ ಕುಳಿತೆ. ಅವತ್ತು ಮುಂಬಯಿ ಮತ್ತು ಕರ್ನಾಟಕಗಳಲ್ಲಿ ವಿಚಾರವಂತರ ಕೊಲೆಯಾಗುತ್ತಿರುವ ಬಗ್ಗೆ ಚರ್ಚೆ ನಡೆಯುತ್ತಿತ್ತು. ಒಂದು ಬಣ ಅವರ ಸಾವನ್ನು ಖಂಡಿಸುತ್ತಿತ್ತು. ಇನ್ನೊಂದು ಬಣ ಅದಕ್ಕೆ ‘ತಾವು’ ಕಾರಣವಲ್ಲವೆಂದು ಸಮರ್ಥಿಸಿಕೊಳ್ಳುತ್ತಿತ್ತು. ಇಬ್ಬರೂ ಹೊಡೆದಾಡುವ ಮಟ್ಟಕ್ಕೆ ತಲುಪುವ ವೇಳೆಗೆ ಎಡ ಮತ್ತು ಬಲದವರಿಗೆ ತಾವು ಎಡವೋ ಬಲವೋ ಗೊತ್ತಿಲ್ಲದೆ ಎರಡನ್ನೂ ಮಿಕ್ಸ್ ಮಾಡಿಕೊಂಡು ಪೂರಾ ಕಲಸುಮೇಲೋಗರವಾಗಿ ಹೋಗಿತ್ತು. ಸರಿ ತಪ್ಪುಗಳ ನಡುವಿನ ವ್ಯತ್ಯಾಸವೇ ಅವರಿಗೆ ಇಲ್ಲವೆಂದು ನನಗೆ ಖಚಿತವಾಗಿತ್ತು. ಅಷ್ಟರಲ್ಲಿ ತೀರಾ ಬೇಸತ್ತ ಆಸಾಮಿಯೊಬ್ಬ ಈ ಮಿಕವನ್ನಾದರೂ ಹೊಸದಾಗಿ ಸೇರಿಸಿಕೊಂಡು ಒಂದು ಗುಲಗಂಜಿಕಾಯಿ ಗಾತ್ರಕ್ಕೆ ತಾನೇ ಹೆಚ್ಚು ತೂಗಬಹುದೇನೋ ಎನ್ನುವ ಕೊಟ್ಟ ಕೊನೆಯ ಆಸೆಯ ಕಿರಣಗಳನ್ನು ಹೊತ್ತುಕೊಂಡು ನನ್ನೆಡೆಗೆ ನೋಡಿದ. ಅಷ್ಟೇ ಸಾಕೆಂದು ಕಾದು ಕುಳಿತಿದ್ದ